## ಕಾಮಿಡಿ ಮಾಡಿದ್ದು ಯಾರು?

ಎರಡನೇ ಸೆಮಿಸ್ಟರ್ ಪರೀಕ್ಷೆ ಸಮೀಪಿಸುತಿತ್ತು. ಪಾಠಗಳೆಲ್ಲಾ ಮುಗಿದಿದ್ದು, ರಿವಿಜನ್ ನಡೆದಿತ್ತು. 'ಈ ಸೆಮಿಸ್ಟರಿನಲ್ಲಿ ತುಂಬಾ ಕಠಿಣ ಪಾಠಗಳು ಇಲ್ಲ. ಹಾಗಾಗಿ, ಈ ಬಾರಿ ನೀವೆಲ್ಲಾ ಎಲ್ಲಾ ವಿಷಯಗಳಲ್ಲಿ ಶೇಕಡಾ 90ರಷ್ಟು ಅಂಕಗಳನ್ನು ಪಡಿಬೇಕು' ಎಂದೆ. ಪ್ರತಿಯಾಗಿ ಯಾರೂ, ಏನೂ ಹೇಳಲಿಲ್ಲ. ಹಿಂದಿನ ಬೆಂಚಿನಲ್ಲಿ ಕುಳಿತಿದ್ದವನೊಬ್ಬ, 'ಸರ್ ನೀವೇನೂ ಯೋಚಿಸಬೇಡಿ. ಈ ಬಾರಿ ನಾವು ನೂರಕ್ಕೆ ನೂರು ಅಂಕಗಳನ್ನು ಪಡಿತೀವಿ' ಎಂದ. ಅವನೋ ಸರಿಯಾಗಿ ಕ್ಲಾಸಿಗೆ ಬರದೇ ಇರುವ ಹುಡುಗ. 'ಏಯ್, ಸುಮ್ಮನಿರು ಕಾಮಿಡಿ ಮಾಡ್ತಿದ್ದಿಯಾ?' ಎಂದೆ. ಆತ ಕೂಡಲೆ, 'ನೀವೇ ಅಲ್ವಾ ಸರ್, ಮೊದಲು ಕಾಮಿಡಿ ಮಾಡಿದ್ದು?' ಎಂದು ಬಿಟ್ಟ. ಅವನ ಮಾತಿನಿಂದ ಕ್ಲಾಸಲ್ಲಿ ಎಲ್ಲರೂ ಜೋರಾಗಿ ನಗತೊಡಗಿದರು.



**ಭೋಜರಾಜ ಸೊಪ್ಪಿಮಠ**

## ಪಾರ್ಟಿ ವಾಸನೆ

ನಮ್ಮ ಸಾನ್ವಿ ಬಹಳ ಚೂಟಿ. ಅವಳ ಮುಂದೆ ದೊಡ್ಡವರ ಆಟಗಳು ನಡೆಯುವುದೇ ಇಲ್ಲ. ಪರೀಕ್ಷೆ ಹತ್ತಿರ ಬಂದಿದ್ದರಿಂದ ಅವಳು ಅಪ್ಪನಿಗೆ ಪಾರ್ಟಿಗೆಲ್ಲಾ ಹೋಗುವಂತಿಲ್ಲ ಎಂದು ನಿರ್ಬಂಧಿಸಿದ್ದಳು. ಅವರು ಮನೆಗೆ ಬರುವವರೆಗೆ ತನಗೆ ನಿದ್ರೆ ಬರಲ್ಲ. ರಾತ್ರಿ ತಡವಾಗಿ ಬಂದರೆ ಬೆಳಿಗ್ಗೆ ಬೇಗ ಏಳಲಾಗದು. ಹೀಗಾಗಿ, ತನ್ನ ಪರೀಕ್ಷೆಗೆ ತೊಂದರೆಯಾಗುತ್ತದೆ ಎನ್ನುವುದು ಅವಳ ವಾದ. ಆವತ್ತು ಅವಳಪ್ಪ ಎಂದಿಗಿಂತ ತುಸು ತಡವಾಗಿ ಮನೆಗೆ ಬಂದರು. 'ನಾನು ಹೇಳಿದ್ರೂ ಪಾರ್ಟಿಗೆ ಹೋಗಿದ್ರಿ ಅಲ್ವಾ?' ಎಂದು ಗದರಿದಳು. ಅವರು ಇಲ್ಲ ಎಂದಾಗ ಅವರ ಬಾಯಿಯ ಹತ್ತಿರ ತನ್ನ ಮೂಗು ಒಯ್ದು ಮೂಸಿ ಮೂಸಿ ನೋಡುತ್ತಿದ್ದಳು. ಅವರು, 'ಬೆಳಿಗ್ಗೆಯಿಂದ ಹಲ್ಲುಜ್ಜಿರಲ್ಲ, ವಾಸನೆ ಬಂದೇ ಬರುತ್ತೆ' ಎಂದರೆ, 'ಇದೆ... ವಾಸನೆ ಇದೆ... ಪಾರ್ಟಿ ವಾಸನೆ ಇದೆ... ಇದು ಹಲ್ಲುಜ್ಜದೇ ಇರುವ ವಾಸನೆ ಅಲ್ಲ... ಎಣ್ಣೆ ವಾಸನೆ...' ಎಂದಳು ಗಂಭೀರವಾಗಿ. ಅವಳ ಮಾತು ಕೇಳಿ ಮನೆಮಂದಿಗೆಲ್ಲಾ ಆಶ್ಚರ್ಯ.



ಕಲೆ: ಗಣೇಶ ಆಚಾರ್ಯ

**ಅನುಪಮಾ ವಸ್ತ್ರದ**